**ಸಾಕ್ಷಿಯನ್ನು ದಿನಾಂಕಃ 03-06-2024 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಾದಿಪರ ವಕೀಲರಾದ ಶ್ರೀ ಆರ್.ಬಿರವರಿಂದಃ**

ವಂಶವೃಕ್ಷ ದೃಢೀಕರಣ ಪತ್ರ ಹಾಜರು ಪಡಿಸಿದ್ದು ನಿಪಿ-1 ಎಂದು, ಮರಣ ಪ್ರಮಾಣ ಪತ್ರವನ್ನು ನಿಪಿ-2 ಎಂದು, ವಾಸಸ್ಥಳ ದೃಢೀಕರಣ ಪತ್ರ ನಿಪಿ-3 ಎಂದು, ದಿನಾಂಕ 12-07-2019 ರ ಅಸಲು ಹಕ್ಕು ಬಿಟ್ಟು ಕೊಟ್ಟ ಪತ್ರ ನಿಪಿ-4 ಎಂದು, ದಿನಾಂಕಃ 07-08-2021 ರ ಅಸಲು ಕ್ರಯ ಪತ್ರ ನಿಪಿ-5 ಎಂದು, ದಿನಾಂಕಃ 20-06-2020 ರ ಎರಡು ಅಸಲು ಬಾಡಿಗೆ ಕರಾರು ಪತ್ರ ನಿಪಿ-6 ಮತ್ತು 7 ಎಂದು, ಮೂರು ಮ್ಯುಟೇಶನ್ ರಿಜಿಸ್ಟರ್ ಪ್ರತಿಗಳು ನಿಪಿ-8 ರಿಂದ 10 ಎಂದು, ಜಿಲ್ಲಾಧಿಕಾರಿಯವರ ಭೂ ಪರಿವರ್ತನಾ ಆದೇಶ ನಿಪಿ-11 ಎಂದು, ಎರಡು ರಸೀದಿಗಳು ನಿಪಿ-12 ಮತ್ತು 13 ಎಂದು, ಸರ್ವೆ ನಂ.1/1 ಗೆ ಸಂಬಂಧಪಟ್ಟ ನಕ್ಷೆ ಫಾರಂ ನಂ.4 ಮತ್ತು 11 (ಒಟ್ಟೂ 11 ಪುಟಗಳನ್ನು ಒಳಗೊಂಡಿರುತ್ತದೆ) ನಿಪಿ-14 ಎಂದು ಗುರುತಿಸಲಾಯಿತು, ನಾಲ್ಕು ಕೆ.ಡಿ.ಟಿ ನಮೂನೆಗಳು ನಿಪಿ-15

ರಿಂದ 18 ಎಂದು, ಎರಡು ಕೇವಿಯಟ್ ಅರ್ಜಿಗಳು ನಿಪಿ-19 ಮತ್ತು 20 ಎಂದು, 27 ಆರ್.ಟಿ.ಸಿಗಳು ನಿಪಿ-21 ರಿಂದ 47 ಎಂದು, ಲೀಸ್ ಅಗ್ರೀಮೆಂಟ್ ನಕಲು ನಿಪಿ-48 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಸಾಕ್ಷಿಯ ಪಾಟೀಸವಾಲಿಗೆ ಪ್ರತಿವಾದಿಗಳ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಸಾಕ್ಷಿ ಪಾಟೀಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**